# ಕಂದಾಚಾರ ನಿಲ್ಲಲು ಕಾನೂನು ನೆರವು ಬೇಡವೆ?

ಜಪಮಾಲೆ, ರುದ್ರಾಕ್ಷಿ, ಮಣಿಸರ ಮುಂತಾದವನ್ನು ಧರಿಸುವುದು; ಮಾರಾಟ ಮಾಡುವುದನ್ನು ವಿಧೇಯಕ ಮೌಢ್ಯದ ವ್ಯಾಪಾರಕ್ಕೆ ಸೇರಿಸಿಬಿಟ್ಟಿದೆ! ಜನಪದ ಸಂಸ್ಕೃತಿಯಲ್ಲಿನ ಜನವಿರೋಧಿ ಆಚರಣೆಗಳ ವಿರುದ್ಧ ಕಾನೂನು ರೂಪಿಸುವ ಅಗತ್ಯ ಇದೆ ಎಂದು ಅಸ್ಪಷ್ಟವಾಗಿ ಹೇಳಿದೆ. ಇಂತಹ ವಿರೋಧಾಭಾಸಗಳನ್ನು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಇದೆ.

ಅಮಾನವೀಯ ಆಚರಣೆಗಳ ನಿಲುಗಡೆಗೆ 'ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ–2013'ನ್ನು ರೂಪಿಸಿರುವ ರಾಷ್ಟ್ರೀಯ ಕಾನೂನು ಶಾಲೆಯ ತಜ್ಞರು ಅದನ್ನು ಕಳೆದ ವಾರ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದರ ಬೆನ್ನಿಗೆ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವೂ ಇಂತಹದೇ ಮತ್ತೊಂದು ಕರಡನ್ನು ಸರ್ಕಾರಕ್ಕೆ ಸಲ್ಲಿಸಿದೆ. ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದಲ್ಲಿ ಈ ವಿಧೇಯಕಗಳನ್ನು ಮಂಡಿಸಲಿ, ಚರ್ಚೆಯ ನಂತರ ವಿಧೇಯಕವನ್ನು ಅಂಗೀಕರಿಸಿ– ದೇವರು ಧರ್ಮದ ಹೆಸರಲ್ಲಿ ಮೋಸ ಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ಬರಲಿ ಎಂಬುದು ಈ ಕರಡು ಮಂಡಿಸಿದವರ ಆಶಯ.

ಇಂತಹದೊಂದು ವಿಧೇಯಕವನ್ನು ರೂಪಿಸುವಂತೆ ಸರ್ಕಾರವೇನೂ ಈ ಸಂಸ್ಥೆಗಳಿಗೆ ಕೇಳಿರಲಿಲ್ಲ. ಈ ಕುರಿತ ಯಾವುದೇ ಸಮಿತಿಯನ್ನೂ ರಚಿಸಿರಲಿಲ್ಲ. ಕಂದಾಚಾರಗಳ ವಿರುದ್ಧ ಅಹರ್ನಿಶಿ ಹೋರಾಟ ನಡೆಸಿದ ಮಹಾರಾಷ್ಟ್ರದ ವಿಚಾರವಾದಿ ನರೇಂದ್ರ ದಾಭೋಲ್ಕರ್ ಹತ್ಯೆ ನಂತರ ಎಚ್ಚೆತ್ತುಕೊಂಡ ಮಹಾರಾಷ್ಟ್ರ ಸರ್ಕಾರ ಕಂದಾಚಾರಿಗಳಿಗೆ ಶಿಕ್ಷೆ ವಿಧಿಸುವ ಇಂತಹದೊಂದು ಮಸೂದೆಯನ್ನು ಜಾರಿಗೆ ತಂದಿದೆ. ರಾಜ್ಯದಲ್ಲೂ ಇಂತಹ ಶಾಸನ ರೂಪುಗೊಂಡರೆ ಮೋಸಗಾರರಿಗೆ ತಕ್ಕ ಶಾಸ್ತಿ ನೀಡಲು ಸಾಧ್ಯವಾಗುತ್ತದೆ ಎಂದು ಕೇಳಿಬಂದ ಜನಾಭಿಪ್ರಾಯದ ಹಿನ್ನೆಲೆಯಲ್ಲಿ ಈ ಸಂಸ್ಥೆಗಳು ಸ್ವಯಂಸ್ಫೂರ್ತಿಯಿಂದ ವಿಧೇಯಕಗಳನ್ನು ರೂಪಿಸಿವೆ. ವಿಧೇಯಕಗಳು ಈಗ ಸರ್ಕಾರದ ಅಂಗಳದಲ್ಲಿವೆ. ಅಂಗೀಕರಿಸುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ!

ಆದರೆ ವಿಧೇಯಕಗಳು ಮುಖ್ಯಮಂತ್ರಿಗಳಿಗೆ ಸಲ್ಲಿಕೆಯಾಗಿ ಅದರಲ್ಲಿನ ಮುಖ್ಯಾಂಶಗಳು ಪತ್ರಿಕೆಗಳ ಮೂಲಕ ಬಹಿರಂಗಗೊಂಡ ತಕ್ಷಣ ದೊಡ್ಡ ವಿವಾದ ಸೃಷ್ಟಿಯಾಗಿದೆ ಅಥವಾ ಸೃಷ್ಟಿಸಲಾಗಿದೆ. ವಿರೋಧ ಪಕ್ಷಗಳಷ್ಟೇ ಅಲ್ಲ, ಆಳುವ ಪಕ್ಷದ ಒಳಗೂ ಅಪಸ್ವರ ಎದ್ದಿದೆ!

ಹಾಗಾದರೆ ವಿಧೇಯಕದಲ್ಲೇನಿದೆ?

ಮಕ್ಕಳಾಗದವರಿಗೆ ಮಕ್ಕಳ ಫಲ ನೀಡುವ ಸ್ವಯಂಘೋಷಿತ ದೇವಮಾನವ, ಕಾಯಿಲೆ ಗುಣಪಡಿಸುವ ನೆಪದಲ್ಲಿ ಮಗುವನ್ನು ಎತ್ತಿ ಬಿಸಾಡುವುದು, ಕಬ್ಬಿಣವನ್ನು ದೇಹದಲ್ಲಿ ಚುಚ್ಚಿ ರಥ ಎಳೆಸುವುದು, ದೆವ್ವ ಬಿಡಿಸುವ ನೆಪದಲ್ಲಿ ಹಿಂಸೆ, ಭಾನಾಮತಿ, ಮಾಯಾಮಂತ್ರ, ನರಬಲಿ, ಪ್ರಾಣಿಬಲಿ, ಬೆತ್ತಲೆ ಸೇವೆ, ಮಡೆಸ್ನಾನ, ಪಂಕ್ತಿಬೇಧ, ಬರಿಗೈಲಿ ಶಸ್ತ್ರಚಿಕಿತ್ಸೆ, ಭ್ರೂಣ ಲಿಂಗ ಬದಲಿಸುವುದು, ಬುದ್ಧಿಮಾಂದ್ಯರನ್ನು ಅತಿಮಾನುಷರು ಎಂದು ಬಿಂಬಿಸಿ ವ್ಯಾಪಾರ ಮಾಡಿಕೊಳ್ಳುವುದು –ಮುಂತಾದ ಕಂದಾಚಾರಗಳಿಗೆ ಕಡಿವಾಣ ಹಾಕಲು ಶಿಕ್ಷೆಯ ಸ್ವರೂಪವನ್ನು ಎರಡೂ ವಿಧೇಯಕಗಳು ರೂಪಿಸಿವೆ. ನರಬಲಿಗೆ ಮರಣದಂಡನೆ ಅಥವಾ ಆಜೀವ ಜೈಲು ಶಿಕ್ಷೆ ಸೇರಿದಂತೆ ವಿವಿಧ ಪ್ರಮಾಣದ ಶಿಕ್ಷೆಯನ್ನು ರೂಪಿಸಿವೆ. ವಿಧೇಯಕವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರ, ಜಿಲ್ಲಾ ಮಟ್ಟದಲ್ಲಿ ಜಾಗೃತ ಸಮಿತಿಗಳ ರಚನೆ– ಇವೇ ಮುಂತಾದ ಸಲಹೆಗಳನ್ನು ವಿಧೇಯಕದಲ್ಲಿ ನೀಡಲಾಗಿದೆ.

ನಂಬಿಕೆಗಳನ್ನು ಹೊಂದುವ ಹಕ್ಕು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಇದೆ. ವಿಧೇಯಕ ಈ ಅಂಶವನ್ನೂ ಸ್ಪಷ್ಟಪಡಿಸಿದೆ. ಆದರೆ ಕೆಲವು ಆಚರಣೆಗಳು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರಿಂದ ಅವು ಅಪರಾಧ ಎನಿಸಿಕೊಳ್ಳುತ್ತವೆ. ಅಪರಾಧಗಳಿಗೆ ಕಠಿಣ ಶಿಕ್ಷೆ ನೀಡಿದರೆ ಭಯ ಮೂಡುತ್ತದೆ. ಹಾಗಾಗಿ ಅವು ಮರುಕಳಿಸುವುದಿಲ್ಲ ಎಂದು ಹೇಳಿರುವ ವಿಧೇಯಕ; ವೈಜ್ಞಾನಿಕ ಚಿಂತನೆ, ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳುವ ಕುರಿತು ಸಂವಿಧಾನವೇ ಸ್ಪಷ್ಟವಾಗಿ ಹೇಳಿರುವುದನ್ನೂ– ಅದಕ್ಕನುಗುಣವಾಗಿ ಈ ವಿಧೇಯಕ ರೂಪುಗೊಂಡದ್ದನ್ನು ಸಮರ್ಥಿಸಿಕೊಂಡಿದೆ.

ಧಾರ್ಮಿಕ ಶ್ರದ್ಧೆಗೆ ನಮ್ಮ ತಕರಾರಿಲ್ಲ ಎಂದು ವಿಧೇಯಕ ಹೇಳಿದರೂ, ಅದು ತನ್ನ ಆಶಯ ಮತ್ತು ವ್ಯಾಪ್ತಿಯಲ್ಲಿ ಜಪಮಾಲೆ, ರುದ್ರಾಕ್ಷಿ, ಮಣಿಸರ ಮುಂತಾದವನ್ನು ಧರಿಸುವುದು; ಮಾರಾಟ ಮಾಡುವುದನ್ನು ಮೌಢ್ಯದ ವ್ಯಾಪಾರಕ್ಕೆ ಸೇರಿಸಿಬಿಟ್ಟಿದೆ! ಜನಪದ ಸಂಸ್ಕೃತಿಯಲ್ಲಿನ ಜನವಿರೋಧಿ ಆಚರಣೆಗಳ ವಿರುದ್ಧ ಕಾನೂನು ರೂಪಿಸುವ ಅಗತ್ಯ ಇದೆ ಎಂದು ಅಸ್ಪಷ್ಟವಾಗಿ ಹೇಳಿದೆ. ಇಂತಹ ವಿರೋಧಾಭಾಸಗಳನ್ನು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಇತ್ತು. ಆದರೆ ಈಗ ನಡೆಯುತ್ತಿರುವ ಬೆಳವಣಿಗೆಗಳು ಚರ್ಚೆಗೆ ಅವಕಾಶವೇ ಇಲ್ಲದ ವಾತಾವರಣ ಸೃಷ್ಟಿಸುತ್ತವೆ.

ಜನರ ಅಂಧಶ್ರದ್ಧೆಯನ್ನೇ ಬಂಡವಾಳ ಮಾಡಿಕೊಂಡು ತಮ್ಮ ಟಿಆರ್‌ಪಿ ಏರಿಸಿಕೊಳ್ಳುವ ಭರದಲ್ಲಿರುವ ಕೆಲವು ಮಾಧ್ಯಮಗಳಿಗಾಗಲೀ, ಮತ್ತೆ ಹಲವು ರಾಜಕಾರಣಿಗಾಗಲೀ ಇಂತಹದೊಂದು ವಿಧೇಯಕ ಮಂಡನೆಯಾಗುವುದು ಇಷ್ಟವಿದ್ದಂತೆ ಕಾಣುತ್ತಿಲ್ಲ.

ನಂಬಿಕೆ ಮತ್ತು ಮೂಢನಂಬಿಕೆಗಳ ನಡುವಿನ ಗೆರೆ ತೀರಾ ತೆಳುವಾದದ್ದು. ಖರ್ಚಿಲ್ಲದೆ ತಮ್ಮ ನಂಬಿಕೆಗಳಿಗೆ ಬಲವಾಗಿ ಅಂಟಿಕೊಳ್ಳುವವರದು ಮೂಢನಂಬಿಕೆಯೇ ಆದರೂ ಕ್ಷಮಾರ್ಹ. ಆದರೆ ಅಂತಹ ನಂಬಿಕೆಗಳನ್ನೇ ವ್ಯಾಪಾರಕ್ಕೆ ತಿರುಗಿಸಿ ಅದರ ಲಾಭ ಪಡೆಯುವ ಮಾಧ್ಯಮ, ರಾಜಕಾರಣ ಇರುವವರೆಗೂ– ವೈಜ್ಞಾನಿಕ ಚಿಂತನೆ, ಮಾನವತಾವಾದ ಸಮಾಜದಲ್ಲಿ ನೆಲೆಗೊಳ್ಳಲು ಸಾಧ್ಯವೆ?

**■ ಗುಡಿಹಳ್ಳಿ ನಾಗರಾಜ**



ಈಶ್ವರ್